**ಸಿ ಸಿ ನಂ.68/2019**

**ಪಿಡಬ್ಲ್ಯೂ - 1 ಕೆ ಎ ಶಶಿಕಲಾ**

**ದಿನಾಂಕ 29-07-2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು : ಶ್ರೀ. ಎನ್ ಎಸ್ ಪಿ ಆರೋಪಿ ಪರ ವಕೀಲರಿಂದಃ**

ಆರೋಪಿಗೆ ನೀಡಿದ ಸಾಲ ಪಿಗ್ಮಿ ಸಾಲವಾಗಿರುತ್ತದೆ. ಪಿಗ್ಮಿ ಸಾಲ ಪಡೆಯಬೇಕಾದಲ್ಲಿ ಅವರ ಖಾತೆಯಲ್ಲಿ ಒಂದು ಲಕ್ಷಕ್ಕೆ ಇಪ್ಪತ್ತು ಸಾವಿರ ಠೇವಣಿ ಇಡಬೇಕು ಎಂದರೆ ಸರಿ. ಆರೋಪಿಗೆ ನಾವು ಒಟ್ಟು ರೂ. 90,000/- ಸಾಲ ನೀಡಿರುತ್ತೇವೆ. ಆರೋಪಿಯು ಚೆಕ್ ನ್ನು ಕೊಟ್ಟ ಸಮಯದಲ್ಲಿ ಅಸಲು ಹಾಗೂ ಬಡ್ಡಿ ಸೇರಿ ರೂ. 1,21,500/- ಆಗಿದ್ದು, ಸದರಿ ಮೊತ್ತಕ್ಕೆ ಆರೋಪಿಯು ಚೆಕ್ ನ್ನು ನೀಡಿರುತ್ತಾರೆ. ಆರೋಪಿಯು 2018 ನೇ ಇಸವಿಯಲ್ಲಿ ಚೆಕ್ ನ್ನು ನೀಡಿರುತ್ತಾರೆ. ಆರೋಪಿಯು ಚೆಕ್ ನೀಡಿದ ಸಮಯದಲ್ಲಿ ಆಕೆಯಿಂದ ಯಾವುದೇ ಬರವಣಿಗೆ ಮಾಡಿಸಿಕೊಂಡಿರುವುದಿಲ್ಲ. ಆರೋಪಿಯು ಸಾಲದ ಮರು ಪಾವತಿಯ ಸಂಬಂಧ ಸದರಿ ಚೆಕ್ ನ್ನು ಪಿಗ್ಮಿ ಸಂಗ್ರಹಗಾರರ ಬಳಿ ನೀಡಿರುತ್ತಾರೆ. ಆರೋಪಿಯು ಚೆಕ್ ನ್ನು ತುಂಬಿಸಿಯೇ ಕೊಟ್ಟಿರುತ್ತಾರೆ.

ಗ್ರಾಹಕರಿಗೆ ಸಾಲವನ್ನು ನೀಡುವಾಗ ಅವರಿಂದ ಸಾಲದ ಅರ್ಜಿ ಹಾಗೂ ಪ್ರನೋಟ್, ಅಗ್ರಿಮೆಂಟ್ ಹಾಗೂ ಸಹಿ ಮಾಡಿದ ಖಾಲಿ ಚೆಕ್ ನ್ನುಪಡೆದುಕೊಳ್ಳುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ಯಾವುದೇ ಚೆಕ್ ನ್ನು ಪಡೆದುಕೊಳ್ಳುವುದಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಸಾಲ ನೀಡುವಾಗ ಇಬ್ಬರು ಜಾಮೀನುದಾರರನ್ನು ಪಡೆದುಕೊಳ್ಳುತ್ತೇವೆ ಎಂದರೆ ಸರಿ. ಸದರಿ ಸಾಲದ ಅರ್ಜಿ, ಜಾಮೀನು ಪಡೆದುಕೊಂಡ ದಾಖಲೆ, ಪ್ರಾಮಿಸರಿ ನೋಟ್ ಹಾಗೂ ಆರೋಪಿಯ ಸಾಲದ ಖಾತೆಗೆ ಸಂಬಂಧಿಸಿದ ಸ್ಟೇಟ್ ಮೆಂಟ್ ನ ಪ್ರತಿಯನ್ನು ನ್ಯಾಯಾಲಯಕ್ಕೆ ಆರೋಪಿಯ ಮಧ್ಯಂತರ ಅರ್ಜಿಯಲ್ಲಿ ಕೋರಿಕೊಂಡಂತೆ ಹಾಜರುಪಡಿಸಿರುತ್ತೇನೆ. ಸದರಿ ಸಾಲದ ಅರ್ಜಿಯಲ್ಲಿ ಅರ್ಜಿ ನೀಡಿದ ದಿನಾಂಕ 27-03-2016 ಆಗಿತ್ತು ಎಂದರೆ ಸರಿ. ಅದೇ ರೀತಿ ನಾನು ಹಾಜರುಪಡಿಸಿದ ಪ್ರನೋಟ್ ನಲ್ಲಿ ದಿನಾಂಕ 28-03-2016 ಎಂದು ನಮೂದಿರುತ್ತದೆ ಎಂದರೆ ಸರಿ. ಆರೋಪಿಯು ಸಾಲವನ್ನು ಕಟ್ಟದೇ ಇದ್ದಾಗ ಆಕೆಗೆ ಬ್ಯಾಂಕ್ ನಿಂದ ನೋಟಿಸ್ನ್ನು

ನೀಡಿರುತ್ತೇವೆ. ಸದರಿ ನೋಟಿಸ್ ನ್ನು ಆರೋಪಿ ಸ್ವೀಕರಿಸಿದ್ದಾರೋ ಇಲ್ಲವೋ ಎಂಬುದನ್ನು ದಾಖಲೆ ನೋಡಿ ಹೇಳಬೇಕಾಗುತ್ತದೆ. ಸದರಿ ನೋಟಿಸ್ ನ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅಗತ್ಯವಿದ್ದಲ್ಲಿ ಹಾಜರುಪಡಿಸಬಹುದು ಎಂದು ನುಡಿಯುತ್ತಾರೆ.

ಆ ರೀತಿ ಗ್ರಾಹಕರು ಬ್ಯಾಂಕ್ ನಲ್ಲಿ ಸಾಲವನ್ನು ಪಡೆದು ಅದನ್ನು ಹಿಂತಿರುಗಿಸದೆ ಇದ್ದಲ್ಲಿ ಅಂತಹ ಪ್ರಕರಣವನ್ನು ಆರ್ಬಿಟ್ರೇಟರ್ ಗೂ ಸಹ ಕಳುಹಿಸಿರುವುದು ಉಂಟು. ಸಾಕ್ಷಿ ಮುಂದುವರೆದು ಚೆಕ್ ಬೌನ್ಸ್ ಪ್ರಕರಣವನ್ನು ಕಳಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈ ಪ್ರಕರಣದಲ್ಲಿ ಆರೋಪಿಯು ಮಧ್ಯಂತರ ಅರ್ಜಿ ಸಲ್ಲಿಸಿ ಪಿರ್ಯಾದಿ ಬ್ಯಾಂಕ್ ನಿಂದ ದಾಖಲೆಗಳನ್ನು ಹಾಜರುಪಡಿಸುವಂತೆ ಕೋರಿಕೊಂಡ ಅರ್ಜಿಯ ಮೇರೆಗೆ ಪಿರ್ಯಾದಿ ಬ್ಯಾಂಕ್ ನವರು ಹಾಜರುಪಡಿಸಿದ ಆರೋಪಿ ನೀಡಿದ ಸಾಲದ ಅರ್ಜಿಯ ಪ್ರತಿ, ಪ್ರನೋಟ್, ಡಿಮ್ಯಾಂಡ್ ಪ್ರಾಮಿಸರಿ ನೋಟ್, ಕುಟುಂಬ ಒಪ್ಪಿಗೆ ಪತ್ರ ಹಾಗೂ ಆಕೆಯ ಸ್ಟೇಟ್ ಮೆಂಟ್ ಆಫ್ ಅಕೌಂಟ್ ನ್ನು ತೋರಿಸಲಾಗಿ, ಸಾಕ್ಷಿಯು ಅವುಗಳನ್ನು ಒಪ್ಪಿಕೊಂಡಿದ್ದು, ಸಾಕ್ಷಿಯು ಒಪ್ಪಿಕೊಂಡ ಮೇರೆಗೆ ಅವುಗಳನ್ನು ಆರೋಪಿ ಪರ ಕ್ರಮವಾಗಿ ನಿಡಿ1 ರಿಂದ 5 ಎಂದು ಗುರುತಿಸಲಾಯಿತು.

ಆರೋಪಿಯು ಮನೆಯಲ್ಲಿ ಚೆಕ್ ನ್ನು ನೀಡಿದ್ದು, ಅದನ್ನು ಸಾಲ ವಸೂಲಾತಿಗೆ ಹೋದವರು ಪಡೆದುಕೊಂಡು ಬ್ಯಾಂಕ್ ಗೆ ನೀಡಿರುತ್ತಾರೆ. ಆರೋಪಿಯು ಆ ರೀತಿ ಯಾವುದೇ ಚೆಕ್ ನ್ನುನೀಡಿರುವುದಿಲ್ಲ, ಬದಲಾಗಿ ನಮ್ಮ ಬ್ಯಾಂಕ್ ನಿಂದ ಸಾಲ ವಸೂಲಾತಿಗೆ ಹೋದವರು ಬಲವಂತವಾಗಿ ಆರೋಪಿಯಿಂದ ಚೆಕ್ ನ್ನು ಪಡೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಪಡೆದ ಸಾಲ ಸಮಯ ಮುಗಿದಿದ್ದರಿಂದ ಆಕೆಯ ವಿರುದ್ದ. ಆರ್ಬಿಟೇಟರ್ ನ್ಯಾಯಾಲಯದಲ್ಲಿ ಪ್ರಕರಣ ಹೂಡಲು ಬರುವುದಿಲ್ಲ ಎನ್ನುವ ಕಾರಣಕ್ಕಾಗಿ ಈ ಸುಳ್ಳು ಪ್ರಕರಣ ಹೂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಸಾಲದ ಹಣವನ್ನು ಬಾಕಿ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಬ್ಯಾಂಕ್ ನ ಸಿಬ್ಬಂದಿಯವರು ಬ್ಯಾಂಕ್ ನ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದು, ಅದನ್ನು ವಸೂಲಿ ಮಾಡುವ ಹಾಗಾ ಸರಿದೂಗಿಸುವ ಸಂಬಂಧ ಮುಗ್ದರಾದ ಆರೋಪಿಯಂತಹ ವ್ಯಕ್ತಿಗಳ ಮೇಲೆ ಸುಳ್ಳು ಕೇಸ್ ನ್ನು ಹಾಕಿರುತ್ತೇವೆ

ಎಂದರೆ ಸರಿಯಲ್ಲ. ನಿಡಿ1 ರಿಂದ 4 ರಲ್ಲಿರುವ ಸಹಿಗಳು ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿರುವ ಸಹಿಗಳನ್ನು ನಾವು ಫೋರ್ಜರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ರೀತಿ ಹಲವು ಪ್ರಕರಣದಲ್ಲಿ ನಮ್ಮ ಬ್ಯಾಂಕ್ ನ ಸಿಎಓ ಕೃಷ್ಣ ರವರು ಗ್ರಾಹಕರ ಸಹಿಗಳನ್ನು ದಾಖಲೆಗೆ ಫೋರ್ಜರಿ ಮಾಡಿದ್ದು, ಅವರನ್ನು ಬ್ಯಾಂಕ್ ನಿಂದ ಅಮಾನತ್ತುಗೊಳಿಸಲಾಗಿತ್ತು ಎಂದರೆ ಸರಿಯಲ್ಲ. ಅವರ ವಿರುದ್ಧ ನಮ್ಮ ಬ್ಯಾಂಕ್ ನಿಂದ ಪುಕಾರು ನೀಡಿದ್ದು, ಅವರಿಗೆ ಸಂಸ್ಥೆಯಿಂದ ವಿಚಾರಣೆಯಾಗಿರುತ್ತದೆ ಎಂದರೆ ಸಾಕ್ಷಿಯು ಅದಕ್ಕು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ.

ಸಹಿ/-
(ಸಂತೋಷ ಕೊಠಾರಿ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ